# All India Radio: Bangalore
# National Bulletins In Kannada
# 09.07.2025 / 1.10pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09.07.2025 / 1.10pm**

**<><*<><>*><>**

ಮುಖ್ಯಾಂಶಗಳು

- ಯಶಸ್ವಿ ಬ್ರೆಜಿಲ್ ಪ್ರವಾಸದ ಬಳಿಕ ನಮೀಬಿಯಾದ ವಿಂಡ್‌ಹೋಕ್ ತಲುಪಿದ ಪ್ರಧಾನಿ ನರೇಂದ್ರ ಮೋದಿ; ಇಂದು ನಮೀಬಿಯಾ ಸಂಸತ್ತನ್ನುದ್ದೇಶಿಸಿ ಭಾಷಣ
- ೨.೫ ಲಕ್ಷ ಚದರ ಕಿಲೋಮೀಟರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಇಂಧನ ಅನ್ವೇಷಣಾ ಕಾರ್ಯ ಕೈಗೊಳ್ಳಲು ಭಾರತ ಸಜ್ಜು- ಕೇಂದ್ರ ಸಚಿವ ಹರ್ದೀಪ್‌ಸಿಂಗ್ ಪುರಿ
- ಪುಲ್ವಾಮ ದಾಳಿ ಸೇರಿದಂತೆ ಭಾರತದಲ್ಲಾದ ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ನೆರವಿಗೆ ಆನ್‌ಲೈನ್ ವಾಣಿಜ್ಯ ವೇದಿಕೆಗಳ ಬಳಕೆ - ಎಫ್.ಎ.ಟಿ.ಎಫ್ ವರದಿಯಿಂದ ಬಹಿರಂಗ
- ಗುಜರಾತ್‌ನ ವಡೋದರಾದಲ್ಲಿರುವ ಸೇತುವೆ ಕುಸಿತ; ಮೂರು ಸಾವು; ನಾಲ್ಕು ವಾಹನಗಳು ನೀರು ಪಾಲು
- ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿ; ನಾಲ್ಕನೇ ಪಂದ್ಯದಲ್ಲಿಂದು ಭಾರತ-ಇಂಗ್ಲೆಂಡ್ ಮುಖಾಮುಖಿ

**><><><><><><><><><><**

ನಮಿಬಿಯಾ ಅಧ್ಯಕ್ಷೆ ನೆಟುಂಬೊ ನಾಂಡಿ ಎನ್‌ಧೈತ್ವಾ ಅವರ ಆಹ್ವಾನದ ಮೇರಿಗೆ ತಮ್ಮ ಪಂಚ ರಾಷ್ಟ್ರಗಳ ಪ್ರವಾಸದ ಕೊನೆಯ ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು, ಇಂದು ನಮಿಬಿಯಾದ ವಿಂಡ್‌ಹೋಕ್‌ಗೆ ತಲುಪಿದ್ದಾರೆ. ಅವರನ್ನು ನಮಿಬಿಯಾ ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ವ್ಯಾಪಾರ ಸಚಿವ ಸೆಲ್ಮಾ ಅಶಿಪಾಲಾ ಮುಸವ್ಯಿ ಬರಮಾಡಿಕೊಂಡರು. ಬಳಿಕ ಪ್ರಧಾನಿಯವರಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಈ ವೇಳೆ ಪಾರಂಪರಿಕ ಗರ್ಬಾ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ನಮಿಬಿಯಾ ಒಂದು ಮೌಲ್ಯಯುತ ಮತ್ತು ವಿಶ್ವಾಸಾರ್ಹ ಆಫ್ರಿಕಾದ ಪಾಲುದಾರ ರಾಷ್ಟ್ರವಾಗಿದ್ದು, ಭಾರತ ಅದರೊಂದಿಗೆ ದ್ವಿಪಕ್ಷೀಯ ಸಹಕಾರಕ್ಕೆ ಉತ್ತೇಜನ ನೀಡಲು ಬಯಸುತ್ತದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಇಂದು ನಮಿಬಿಯಾ ಅಧ್ಯಕ್ಷೆ ಡಾ.ನೆಟುಂಬೊ ನಾಂಡಿ ಎನ್‌ದೈತ್ವ ಅವರನ್ನು ಭೇಟಿ ಮಾಡಲು ಹಾಗೂ

ನಮಿಬಿಯಾ ಸಂಸತ್ತನ್ನುದ್ದೇಶಿಸಿ ಮಾತನಾಡಲು ಎದುರು ನೋಡುತ್ತಿರುವುದಾಗಿ ತಿಳಿಸಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿಯವರ ನಮಿಬಿಯಾಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ. ಭಾರತೀಯ ಪ್ರಧಾನಮಂತ್ರಿಯೊಬ್ಬರು ೨೭ ವರ್ಷಗಳ ನಂತರ ಕೈಗೊಳ್ಳುತ್ತಿರುವ ಮೊದಲ ಹಾಗೂ ಒಟ್ಟಾರೆ ಮೂರನೇ ಭೇಟಿ ಇದಾಗಿದೆ. ತಮ್ಮ ಭೇಟಿಯ ವೇಳೆ ಪ್ರಧಾನಿ, ನಮಿಬಿಯಾ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ನಿಯೋಗ ಮಟ್ಟದ ಮಾತುಕತೆಗಳೂ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ನಮಿಬಿಯಾ ಸಂಸತನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಪ್ರಧಾನಿ, ಸಂಸ್ಥಾಪಕ ರಾಷ್ಟ್ರಪಿತ ಹಾಗೂ ನಮಿಬಿಯಾದ ಪ್ರಥಮ ಅಧ್ಯಕ್ಷ ಡಾ.ಸ್ಯಾಮ್ ನುಜೊಮಾ ಅವರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ತೈಲ ಮತ್ತು ಅನಿಲ, ಹೈಡ್ರೋ ಕಾರ್ಬನ್, ನಿರ್ಣಾಯಕ ಖನಿಜಗಳು ಸೇರಿದಂತೆ ವಿವಿಧ ಹೊಸ ಕ್ಷೇತ್ರಗಳಲ್ಲಿ ಆರ್ಥಿಕ ಪಾಲುದಾರಿಕೆಯನ್ನು ಅನ್ವೇಷಿಸುವುದರ ಮೇಲೆ ಪ್ರಧಾನಿಯವರ ಈ ಭೇಟಿ ಕೇಂದ್ರೀಕರಿಸಲಿದೆ. ಭಾರತದ ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ ಕೂಡ ಮಾತುಕತೆಯ ಪ್ರಮುಖ ಅಂಶವಾಗಿದೆ. ಇದಲ್ಲದೆ, ನಮಿಬಿಯಾ ಭಾರತ ಆರಂಭಿಸಿರುವ ಕೆಲವು ಜಾಗತಿಕ ಉಪಕ್ರಮಗಳಾದ ವಿಪತ್ತು ನಿರೋಧಕ ಮೂಲ ಸೌಕರ್ಯ ಒಕ್ಕೂಟ, ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಸಂಘಟನೆ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟಕ್ಕೆ ಸೇರ್ಪಡೆಯಾಗುವ ನಿರೀಕ್ಷೆಯಿದೆ.

><><><><><><><><><><

ಇತಿಹಾಸದಲ್ಲಿ ಅತಿ ದೊಡ್ಡ ಕಡಲಾಚೆಗಿನ ಇಂಧನ ಅನ್ವೇಷಣಾ ಪ್ರಯತ್ನಗಳಲ್ಲಿ ಒಂದಾಗಿ ಭಾರತ ೨.೫ ಲಕ್ಷ ಚದರ ಕಿಲೋಮೀಟರ್‌ಗಿಂತ ಹೆಚ್ಚಿನ ಪ್ರದೇಶವನ್ನು ಪರಿಶೀಲಿಸಲು ಸಜ್ಜಾಗಿದೆ ಎಂದು ಕೇಂದ್ರ ಸಚಿವ ಹರ್ದೀಪ್ ಸಿಂಗ್‌ಪುರಿ ತಿಳಿಸಿದ್ದಾರೆ. ಈ ಅನ್ವೇಷಣೆ ಓಪನ್ ಏಕ್ರೇಜ್ ಲೈಸೆನ್ಸಿಂಗ್ ಪ್ರೋಗ್ರಾಂ ಹಂತ ಹತ್ತರಡಿ ನಡೆಯಲಿದೆ. ಸಾಮಾಜಿಕ ಮಾಧ್ಯಮದಲ್ಲಿ ಸಚಿವರು, ಈ ಕುರಿತು ಮಾಹಿತಿ ನೀಡಿದ್ದು, ತೈಲ ಮತ್ತು ಅನಿಲ ಅನ್ವೇಷಣೆ ಮತ್ತು ಉತ್ಪಾದನೆ ಕ್ಷೇತ್ರದಲ್ಲಿ ಅಡೆತಡೆಗಳಿಲ್ಲ. ಬದಲಾಗಿ ಅವಕಾಶಗಳಿವೆ. ಶಕ್ತಿಯ ಹೊಸ ಯುಗವನ್ನು ಪ್ರವೇಶಿಸಲು ಭಾರತ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸದಂತೆ ಸಚಿವ ಹರ್ದೀಪ್ ಸಿಂಗ್ ಪುರಿ ನಾರ್ವೆಯ ಬರ್ಗನ್‌ನಲ್ಲಿ ನಡೆದ ಕಡಲಾಚೆಗಿನ ಇಂಧನ ಸಮೂಹ ಸಭೆಯಲ್ಲಿ ಪಾಲ್ಗೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿಯವರ ಈ ದಿಟ್ಟ ಹೆಜ್ಜೆ ಭಾರತ, ಇಂಧನ ಕ್ಷೇತ್ರದಲ್ಲಿ ಪ್ರಮುಖ ಪರಿವರ್ತನೆಯ ಮುಂದಾಳತ್ವ ವಹಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಅವರು ತಿಳಿಸಿದರು. ಇದಕ್ಕೆ ಪೂರಕವಾಗಿ ಸಚಿವರು, ಬಿಡಬ್ಲ್ಯು- ಎಲ್‌ಪಿಜಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಕ್ರಿಸ್ಟಿಯನ್ ಸೊರೆನ್‌ಸನ್ ಅವರನ್ನು ನಾರ್ವೆಯ ಒಸ್ಲೋದಲ್ಲಿ ಭೇಟಿ ಮಾಡಿದರು.

><><><><><><><><><><

ಕೇಂದ್ರ ತನಿಖಾ ದಳ-ಸಿಬಿಐ, ಅಮೆರಿಕದಲ್ಲಿ ಆರ್ಥಿಕ ಅಪರಾಧಿ ಮೋನಿಕಾ ಕಪೂರ್ ಅವರನ್ನು ವಶಕ್ಕೆ ಪಡೆದುಕೊಂಡಿದ್ದು, ಇಂದು ಅವರನ್ನು ಭಾರತಕ್ಕೆ ಕರೆತರಲಾಗುತ್ತಿದೆ. ಕಪೂರ್ ಮೇಲೆ ೨೦೦೨ ರ ಆಮದು-ರಫ್ತು ವಂಚನೆಯ ಆರೋಪವಿದೆ ಮತ್ತು ಅಂದಿನಿಂದ ಅವರು ತಲೆಮರೆಸಿಕೊಂಡಿದ್ದರು. ಆಪಾದಿತ ವಂಚನೆಯ ನಂತರ ಪರಾರಿಯಾಗಿದ್ದ ಮೋನಿಕಾ ಕಪೂರ್ ೧೯೯೯ ರಲ್ಲಿ ಅಮೆರಿಕಕ್ಕೆ ಹೋಗಿದ್ದರು, ಅಲ್ಲಿ ಅವರು ತಮ್ಮ ಇಬ್ಬರು ಸಹೋದರರೊಂದಿಗೆ ಆಭರಣ ವ್ಯವಹಾರಕ್ಕಾಗಿ ನಕಲಿ ದಾಖಲೆಗಳನ್ನು ರಚಿಸಿದ್ದರು. ಈ ದಾಖಲೆಗಳನ್ನು ಭಾರತ ಸರ್ಕಾರದಿಂದ ಸುಂಕ ರಹಿತ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಪರವಾನಗಿಗಳನ್ನು ಪಡೆಯಲು ಬಳಸಲಾಗಿದೆ ಎಂದು ಸಿಬಿಐ ಹೇಳಿಕೆಯಲ್ಲಿ ತಿಳಿಸಿದೆ.

><><><><><><><><><><

ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಗಳಲ್ಲಿ ಭಯೋತ್ಪಾದಕರು ದಾಳಿಗೆ ಅಗತ್ಯವಿದ್ದ ವಸ್ತುಗಳನ್ನು ಖರೀದಿಸಲು ಆನ್‌ಲೈನ್ ವಾಣಿಜ್ಯ ವೇದಿಕೆಗಳನ್ನು ಬಳಸಿದ್ದಾಗಿ ಜಾಗತಿಕ ಭಯೋತ್ಪಾದನಾ ಹಣಕಾಸು ನಿಗಾ ಸಂಸ್ಥೆ- ಹಣಕಾಸು ಕ್ರಿಯಾ ಕಾರ್ಯಪಡೆ- ಎಫ್.ಎ.ಟಿ.ಎಫ್ ವರದಿ ತಿಳಿಸಿದೆ. ಜಮ್ಮು-ಕಾಶ್ಮೀರದ ಪುಲ್ವಾಮ ದಾಳಿ ಮತ್ತು ಉತ್ತರಪ್ರದೇಶದ ಗೋರಖ್‌ನಾಥ್ ದೇವಾಲಯದ ಬಳಿಯ ಭಯೋತ್ಪಾದಕ ದಾಳಿ ಪ್ರಕರಣಗಳಲ್ಲಿ ಈ ಕುರಿತು ಪುರಾವೆಗಳು ಸಿಕ್ಕಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು, ಸರಕು ಮತ್ತು ತರಬೇತಿ ಸೇರಿದಂತೆ ಇತರ ನೆರುವು ಪಡೆಯಲು, ಸಾಮಾಜಿಕ ಜಾಲತಾಣಗಳು, ಮೆಸೆಜಿಂಗ್ ಆಪ್‌ಗಳು ಮತ್ತು ಕ್ರೌಡ್ ಫಂಡಿಂಗ್ ವೇದಿಕೆಗಳನ್ನು ಹೆಚ್ಚಾಗಿ ದುರುಪಯೋಗಪಡಿಸಿಕೊಳ್ಳುತ್ತಿವೆ ಎಂದು ತಿಳಿಸಲಾಗಿದೆ.

><><><><><><><><><><

ಗುಜರಾತ್‌ನ ವಡೋದರಾದಲ್ಲಿರುವ ಪದ್ರಾ ತಾಲ್ಲೂಕಿನ 'ಗಂಭೀರ' ಸೇತುವೆಯ ಒಂದು ಭಾಗ ಇಂದು ಬೆಳಗ್ಗೆ ಕುಸಿದ ಪರಿಣಾಮ ಮೂವರು ಮೃತಪಟ್ಟಿದ್ದು, ಐದು ಮಂದಿ ಗಾಯಗೊಂಡಿದ್ದಾರೆ. ಆನಂದ್ ಮತ್ತು ವಡೋದ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ಈ ಸೇತುವೆ ಕುಸಿದು ಎರಡು ಟ್ರಕ್‌ಗಳು, ಬೊಲೆರೊ ಎಸ್‌ಯುವಿ ಮತ್ತು ಪಿಕಪ್ ವ್ಯಾನ್ ಸೇರಿದಂತೆ ನಾಲ್ಕು ವಾಹನಗಳು ನದಿಗೆ ಬಿದ್ದಿವೆ. ವಾಹನಗಳು ನದಿಗೆ ಬೀಳುವ ಕೆಲವೇ ಕ್ಷಣಗಳ ಮೊದಲು ದೊಡ್ಡ ಬಿರುಕು ಬಿಟ್ಟ ಶಬ್ದ ಕೇಳಿಬಂದಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅಗ್ನಿಶಾಮಕ ದಳದ ತಂಡಗಳು, ಸ್ಥಳೀಯ ಪೊಲೀಸರು ಮತ್ತು

ವಡೋದರಾ ಜಿಲ್ಲಾಡಳಿತದ ಸದಸ್ಯರು ಸ್ಥಳಕ್ಕೆ ಧಾವಿಸಿ ತಕ್ಷಣದ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಗುಜರಾತ್ ಸರ್ಕಾರ ಸೇತುವೆ ಕುಸಿತದ ಕಾರಣ ತಿಳಿಯಲು ತಾಂತ್ರಿಕ ತಜ್ಞರನ್ನೊಳಗೊಂಡ ತಂಡವನ್ನು ತನಿಖೆಗಾಗಿ ಕಳುಹಿಸಿಕೊಟ್ಟಿದೆ.

><><><><><><><><><><

ಇಂಗ್ಲೆಂಡ್‌ನ ಓಲ್ಡ್ ಟ್ರ್ಯಾಫೋರ್ಡ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಐದು ಪಂದ್ಯಗಳ ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಭಾರತ ಹಾಗೂ ಇಂಗ್ಲೆಂಡ್ ವನಿತೆಯರ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೧ ಗಂಟೆಗೆ ಆರಂಭವಾಗಲಿದೆ. ಈವರೆಗೆ ನಡೆದಿರುವ ಮೂರು ಪಂದ್ಯಗಳ ಪೈಕಿ ಎರಡಲ್ಲಿ ಗೆದ್ದು, ಮುನ್ನಡೆಯಲ್ಲಿರುವ ಭಾರತ, ಈ ಪಂದ್ಯದಲ್ಲಿ ಗೆಲುವು ಸಾಧಿಸಿ, ಸರಣಿಯನ್ನು ಕೈವಶ ಮಾಡಿಕೊಳ್ಳುವ ತವಕದಲ್ಲಿದೆ.

><><><><><><><><><><

ಜಮ್ಮು ಮತ್ತು ಕಾಶ್ಮೀರ- ಅಮರನಾಥ ಯಾತ್ರೆಯ ಮೊದಲ ಆರು ದಿನಗಳಲ್ಲಿ ಅಮರನಾಥ ಗುಹೆಯಲ್ಲಿ ದರ್ಶನ ಪಡೆದ ಒಟ್ಟು ಭಕ್ತರ ಸಂಖ್ಯೆ ಒಂದು ಲಕ್ಷದ ೧೧ ಸಾವಿರ ತಲುಪಿದೆ.  ನಿನ್ನೆ ೧೮ ಸಾವಿರಕ್ಕೂ ಹೆಚ್ಚು ಯಾತ್ರಿಕರು ಪವಿತ್ರ ಗುಹೆಯಲ್ಲಿ ದರ್ಶನ ಪಡೆದರು. ಇದಕ್ಕೆ ಪ್ರತಿಕ್ರಿಯಿಸಿದ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ತೀರ್ಥಯಾತ್ರೆಯ ಮೊದಲ ಆರು ದಿನಗಳಲ್ಲಿ ಅಮರನಾಥ ಯಾತ್ರೆ ೧ ಲಕ್ಷ ಯಾತ್ರಿಕರನ್ನು ಮೀರಿದೆ ಎಂದು ತಿಳಿಸಿದ್ದಾರೆ. ಪಹಲ್ಗಾಮ್ ಮತ್ತು ಬಾಲ್ಟಾಲ್ ಮಾರ್ಗಗಳಲ್ಲಿ ಯಾತ್ರೆ ಸುಗಮವಾಗಿ ಮುಂದುವರಿಯುತ್ತಿದೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಭಕ್ತರನ್ನು ಸೆಳೆಯುವ ನಿರೀಕ್ಷೆಯಿದೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳ ನಡುವೆ ೭ ಸಾವಿರದ ೫೭೯ ಯಾತ್ರಿಕರ ಮತ್ತೊಂದು ತಂಡ, ಜಮ್ಮುವಿನಿಂದ ಇಂದು ಮುಂಜಾನೆ ೩೦೨ ವಾಹನಗಳಲ್ಲಿ ಭಗವತಿ ನಗರ ಯಾತ್ರಿ ನಿವಾಸ್ ಮೂಲ ಶಿಬಿರದಿಂದ  ಹೊರಟಿದೆ.

><><><><><><><><><><